# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **290** |
| 2 | ಸದಸ್ಯರ ಹೆಸರು | : | **ಶ್ರೀ ಅಡಗೂರ್ ಹೆಚ್. ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು)** |
| 3 | ಉತ್ತರಿಸುವ ದಿನಾಂಕ | : | **17.02.2022** |
| 4 | ಉತ್ತರಿಸುವ ಸಚಿವರು | : | **ಗೃಹ ಸಚಿವರು** |

| ಪ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪೊಲೀಸ್ ಇಲಾಖೆಯ ಆಡಳಿತ ನಿರ್ವಹಣೆಯಲ್ಲಿ ನಿಯಮಗಳ ಉಲ್ಲಂಘನೆಯಿಂದ (ಇದುವರೆವಿಗೂ) ನಿರ್ಲಕ್ಷತೆಯಿಂದ ಸರ್ಕಾರದ ಬೊಕ್ಕಸಕ್ಕೆ ಉಂಟಾದ ಆರ್ಥಿಕ ನಷ್ಟವನ್ನು ಪತ್ತೆ ಹಚ್ಚಲು ಇಲಾಖಾ ಆಂತರಿಕ ಲೆಕ್ಕ ಪರಿಶೋಧನಾ ತಂಡದಿಂದ ಮತ್ತು ಮಹಾಲೇಖಪಾಲರಿಂದ ಲೆಕ್ಕ ಪರಿಶೋಧನೆ ಕೈಗೊಂಡು ವರದಿ ಸಲ್ಲಿಸಿದ್ದು, (ಆಂತರಿಕ ಲೆಕ್ಕ ಪರಿಶೋಧನೆ ತಂಡದಿಂದ ಮತ್ತು ಮಹಾಲೇಖಪಾಲರಿಂದ ಲೆಕ್ಕ ಪರಿಶೋಧನೆ) ಸದರಿ ಆಂತರಿಕ ಲೆಕ್ಕ ಪರಿಶೋಧನೆ ಮತ್ತು ಮಹಾಲೇಖಪಾಲರಿಂದ ನಡೆದ ವರದಿಗಳ ಮತ್ತು ವರ್ಷವಾರು ನಡೆಸಿದ ಲೆಕ್ಕ ಪರಿಶೋಧನೆ ಅನ್ವಯ ವಸೂಲಿಗೆ ಸೂಚಿಸಿದ ಒಟ್ಟು ಹಣ ಎಷ್ಟು? ಸದರಿ ವರದಿಗಳನ್ವಯ ವಸೂಲಿಗೆ ಸೂಚಿಸಿದ ಆಕ್ಷೇಪಣೆಗಳು ಎಷ್ಟು ವರ್ಷಗಳಿಂದ ಬಾಕಿ ಇವೆ (ವರದಿಗಳ ಮತ್ತು ವರ್ಷವಾರು ನಡೆಸಿದ ಲೆಕ್ಕ ಪರಿಶೋಧನೆಯ ಅನ್ವಯ ವಿವರ ನೀಡುವುದು). | **ಆಂತರಿಕ ಲೆಕ್ಕ ಪರಿಶೋಧನೆ ಕುರಿತು:-** |

| ವರ್ಷ | ವಸೂಲಿಗೆ ಸೂಚಿಸಿದ ಒಟ್ಟು ಮೊತ್ತ | ಇದುವರೆವಿಗೂ ವಸೂಲಾದ ಒಟ್ಟು ಮೊತ್ತ | ಬಾಕಿ ಇರುವ ಒಟ್ಟು ಮೊತ್ತ |
|---|---|---|---|
| 1985 | 416137 | 360337 | 55800 |
| 1987 | 137865.37 | 83911.37 | 53954 |
| 1989 | 10435099 | 9563664 | 871435 |
| 1990 | 109070 | 109070 | 0 |
| 1994 | 641383.9 | 613447.16 | 27936.74 |
| 1999 | 2728973 | 2728163 | 810 |
| 2000 | 602525 | 550125 | 52400 |
| 2001 | 24302420 | 3012993 | 21289427 |
| 2002 | 5818190 | 260528 | 5557662 |
| 2003 | 22415 | 22415 | 0 |
| 2005 | 1211507 | 1023784 | 187723 |
| 2006 | 3965747 | 3846409 | 119338 |
| 2007 | 1191520 | 239139 | 952381 |
| 2008 | 2360003 | 1112253 | 1247750 |
| 2009 | 14364121 | 11733161 | 2630960 |
| 2010 | 20784115 | 13582326 | 7201789 |
| 2011 | 94555306 | 16359403 | 78195903 |
| 2012 | 93917487 | 83407234 | 10510253 |
| 2013 | 61895326 | 18032414 | 43862912 |
| 2014 | 78850698 | 65135504 | 13715194 |
| 2015 | 250075585 | 14159915.66 | 235915669.3 |
| 2016 | 33898336 | 18769046 | 15129290 |
| 2017 | 40490317 | 20760941 | 19729376 |
| 2018 | 104868753 | 9841893 | 95026860 |
| 2019 | 18747103 | 2779173 | 15967930 |
| 2020 | 211113975 | 27381959 | 183732016 |
| 2021 | 19265236 | 562716 | 18702520 |
| | **1096769213** | **326031924.2** | **770737289.1** |

<u>ಮಹಾಲೇಖಪಾಲರ ಲೆಕ್ಕ ಪರಿವೀಕ್ಷಣೆ ಕುರಿತು:-</u>

| ವರ್ಷ | ವಸೂಲಿಗೆ ಸೂಚಿಸಿದ ಒಟ್ಟು ಮೊತ್ತ | ಇದುವರೆವಿಗೂ ವಸೂಲಾದ ಒಟ್ಟು ಮೊತ್ತ | ಬಾಕಿ ಇರುವ ಒಟ್ಟು ಮೊತ್ತ |
|---|---|---|---|
| 1987 | 64191 | 64191 | 0 |
| 1998 | 1722633 | 1122423 | 600210 |
| 2000 | 620383 | 588969 | 31414 |
| 2002 | 2165 | 2165 | 0 |
| 2003 | 238804 | 238804 | 0 |
| 2004 | 99772 | 99772 | 0 |
| 2005 | 130043 | 130043 | 0 |
| 2007 | 232906 | 232906 | 0 |
| 2008 | 316127 | 316127 | 0 |
| 2010 | 1849594 | 1849594 | 0 |
| 2011 | 17395142 | 10705952 | 6689190 |
| 2012 | 15807361 | 10054836 | 5752525 |
| 2013 | 13528561 | 2265161 | 11263400 |
| 2014 | 53528 | 31088 | 22440 |
| 2015 | 2203043 | 1320076 | 882967 |
| 2016 | 14888862 | 10120128 | 4768734 |
| 2017 | 52398441 | 49206911 | 3191530 |
| 2018 | 1539488 | 139180 | 1400308 |
| 2019 | 458989149 | 430140708 | 28848441 |
| 2020 | 107159294 | 10503096 | 96656198 |
| 2021 | 69680458 | 1236528 | 68443930 |
| | **758919945** | **530368658** | **228551287** |

ಆ) ಅನೇಕ ವರ್ಷಗಳಿಂದ ವರದಿಗಳ ಕಂಡಿಕೆಗಳಂತೆ ವಸೂಲಿ ಮಾಡಿ ಸರ್ಕಾರಕ್ಕೆ ಜಮಾ ಮಾಡದೇ ಕರ್ತವ್ಯ ಲೋಪ ಮತ್ತು ನಿರ್ಲಕ್ಷತನವನ್ನು ಪ್ರದರ್ಶಿಸಿದ ಅಧಿಕಾರಿ ಮತ್ತು ಸಿಬ್ಬಂದಿಗಳ ವಿರುದ್ಧ ಇದುವರೆವಿಗೂ ಕೈಗೊಂಡ ಶಿಸ್ತಿನ ಕ್ರಮಗಳೇನು? ಕ್ರಮ ಕೈಗೊಳ್ಳದಿದ್ದಲ್ಲಿ ಕಾರಣವೇನು? (ವಿವರ ನೀಡುವುದು)

- ಪ್ರತಿ ವರ್ಷ ರೈಲ್ವೆ ಪೊಲೀಸ್ ಸಿಬ್ಬಂದಿ ವರ್ಗದವರ ವೇತನ ಮತ್ತು ಕಛೇರಿ ವೆಚ್ಚಗಳಲ್ಲಿ ಪ್ರತಿಶತ 50:50ರ ಅನುಪಾತದನ್ವಯ ರೈಲ್ವೆ ಮಂಡಳಿಯಿಂದ ಹಿಂಭರಿಸಿಕೊಳ್ಳಲು ಸರ್ಕಾರದ ಆದೇಶ ಸಂ: ಹೆಚ್‌ಡಿ 143 ಇಎಫ್‌ಎಸ್ 79, ದಿ: 10.12.1980ರ ನಿರ್ದೇಶನದಂತೆ ರೈಲ್ವೆ ಮಂಡಳಿಯಿಂದ (ಮೂರು ವಲಯಗಳಿಂದ) ಒಟ್ಟು ಮೊತ್ತ ರೂ.18,58,07,166.00ಗಳನ್ನು ವಸೂಲಿ ಮಾಡಲು ಇಲಾಖೆಯಿಂದ ಪತ್ರ ವ್ಯವಹಾರ ಮಾಡಲಾಗಿದ್ದು, ಸದರಿ ಮೊತ್ತವನ್ನು ವಸೂಲಾತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ರೈಲ್ವೇಸ್ ಪೊಲೀಸ್ ಘಟಕದವರು ತಿಳಿಸಿರುತ್ತಾರೆ.
- ಬಿಬಿಎಂಪಿ ವ್ಯಾಪ್ತಿಗೆ ಎರವಲು ಸೇವಾ ನಿಯಮದಡಿ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿದ್ದು, ಸ್ಥಾಯಿ ಆದೇಶ ಸಂಖ್ಯೆ: 820ರಂತೆ ಪ್ರತಿ ತಿಂಗಳು ವೇತನ ಮತ್ತು ಇತರೆ ಹಣಕಾಸು ಸೌಲಭ್ಯಗಳನ್ನು ವಸೂಲಿ ಮಾಡಬೇಕಾಗಿದ್ದು, ಆ ಅವಧಿಯಲ್ಲಿ ಒಟ್ಟು ರೂ.4,16,564.00 ಮೊತ್ತವು ಬಿಬಿಎಂಪಿಯಿಂದ ಬಾಕಿ ವಸೂಲಿ ಮಾಡಲು ಡಿಸಿಪಿ, ಪಶ್ಚಿಮ ವಿಭಾಗ, ಬೆಂಗಳೂರು ನಗರ ರವರು ಬಿಬಿಎಂಪಿಗೆ ಪತ್ರ ಬರೆಯಲಾಗಿರುತ್ತದೆ.

| | | |
|---|---|---|
| | | • 11ನೇ ಪಡೆ, ಕೆ.ಎಸ್.ಆರ್.ಪಿ., ಹಾಸನ ಘಟಕಕ್ಕೆ ಸಂಬಂಧಿಸಿದಂತೆ ರೂ.40639946.00ಗಳನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡಲು ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ. ಈ ಸಂಬಂಧ ಪ್ರಕರಣ ಸಿ.ಐ.ಡಿ.ಯಲ್ಲಿ ದಾಖಲಾಗಿರುವುದರಿಂದ, ತನಿಖೆ ಮುಂದುವರಿದಿದ್ದು, ವಸೂಲಿಗೆ ಇರುವ ಮೊತ್ತವನ್ನು ಯಾವ ಸಿಬ್ಬಂದಿಗಳಿಂದ ವಸೂಲಿ ಮಾಡಬೇಕು ಮತ್ತು ಎಷ್ಟು ಮೊತ್ತವನ್ನು ವಸೂಲು ಮಾಡಬೇಕು ಎಂಬುದರ ಮಾಹಿತಿ ಕೋರಿ ಸಿ.ಐ.ಡಿ. ರವರಿಗೆ ಪತ್ರ ಸಂಖ್ಯೆ: 06/ಲೆಕ್ಕ (1)/2021-22, ದಿನಾಂಕ: 01.07.2021ರಂದು ಪತ್ರ ಬರೆಯಲಾಗಿದ್ದು, ಮಾಹಿತಿಯನ್ನು ನಿರೀಕ್ಷಿಸಲಾಗಿದೆ. ಮಾಹಿತಿ ದೊರೆತ ಕೂಡಲೇ ವಸೂಲಾತಿ ಕ್ರಮ ತೆಗೆದುಕೊಳ್ಳಲಾಗುವುದು.<br>• ಸದರಿ ಘಟಕದಲ್ಲಿ ಆಗಿರುವ ಅವ್ಯವಹಾರ ಕುರಿತು ಜಂಟಿ ಇಲಾಖಾ ವಿಚಾರಣೆಗೆ ಸರ್ಕಾರ ಆದೇಶಿಸಿದ್ದು, ಆದೇಶ ಸಂಖ್ಯೆ: ಹೆಚ್‌ಡಿ 01 ಪೊಸಿಪ 2021, ದಿನಾಂಕ: 21.04.2021 ರಂತೆ ವಿಚಾರಣಾಧಿಕಾರಿಯನ್ನು ನೇಮಕ ಮಾಡಲಾಗಿರುತ್ತದೆ.<br>• ಬಾಕಿ ಇರುವ ಮೊತ್ತವನ್ನು ಪಿಂಚಣಿಯಿಂದ ಕಡತಗೊಳಿಸಲು ಖಜಾನೆ ಅಧಿಕಾರಿಯವರಿಗೆ ಎ.ಜಿ., ಬೆಂಗಳೂರು ಇವರ ಪತ್ರ ಸಂ:PV5/R1/1016157461/209160/8995/2020-21/75, dt.11.11.2020ರಲ್ಲಿ ಸೂಚಿಸಿರುತ್ತಾರೆಂದು ಎಸ್.ಪಿ., ದಕ್ಷಿಣ ಕನ್ನಡ ಜಿಲ್ಲೆ ರವರು ತಿಳಿಸಿರುತ್ತಾರೆ.<br>• ಎಸ್.ಪಿ., ಉತ್ತರ ಕನ್ನಡ ಜಿಲ್ಲೆ, ಕಾರವಾರ - ಕೊಂಕಣ ರೈಲ್ವೇಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳ ಎರವಲು ವೆಚ್ಚವನ್ನು ಭರಿಸಿಕೊಳ್ಳುವ ಕುರಿತು ಡಿಮ್ಯಾಂಡ್ ನೋಟ್‌ಗಳನ್ನು ಸಂಬಂಧಪಟ್ಟ ಸಂಸ್ಥೆಯವರಿಗೆ ಕಳುಹಿಸಲಾಗಿಯೂ ಇದುವರೆಗೂ ಮೊತ್ತ ಭರಣ ಮಾಡಿರುವುದಿಲ್ಲ.<br>• ಮಹಾಲೇಖಪಾಲರು ಬೆಂಗಳೂರು ರವರು ಅಕ್ಟೋಬರ್-2021ರಲ್ಲಿ 2015-16 ರಿಂದ 2020-21ರವರೆಗೆ ಲೆಕ್ಕ ಪರಿಶೋಧನೆಯನ್ನು ಕೈಗೊಂಡಿದ್ದು, ಅದರಲ್ಲಿ ಸಂಸ್ಥೆಗಳಿಗೆ ನೀಡಿದ ಪೊಲೀಸ್ ಎರವಲು ಸೇವಾ ವೆಚ್ಚಕ್ಕೆ ಸಂಬಂಧಿಸಿದಂತೆ 6,12,28,977=00 ವಸೂಲಾತಿಗೆ ಬಾಕಿ ಇರುವುದಾಗಿ ತಿಳಿಸಿದ್ದು ಆದರೆ ವಸೂಲಾತಿಗೆ ಬಾಕಿ ಇರುವ ಮೊತ್ತ ಕೇವಲ 2,96,13,534=00 ಇದ್ದು ಈ ಕುರಿತು ಮಹಾಲೇಖಪಾಲರು ಬೆಂಗಳೂರು ರವರೊಂದಿಗೆ ಪತ್ರ ವ್ಯವಹಾರ ನಡೆಸಿ ಕಂಡಿಕೆಯನ್ನು ಮುಕ್ತಾಯ ಗೊಳಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ ಎಂದು ಎಸ್.ಪಿ., ಬೆಳಗಾವಿ ಜಿಲ್ಲೆ ರವರು ತಿಳಿಸಿರುತ್ತಾರೆ. |

| | | |
|---|---|---|
| | | • ಎಡಿಜಿಪಿ, ರಾಜ್ಯ ಗುಪ್ತವಾರ್ತೆ, ಬೆಂಗಳೂರು – 2009–13ನೇ ಸಾಲಿನಲ್ಲಿ ಮಹಾಲೇಖಪಾಲರ ಆಕ್ಷೇಪಣೆಯಲ್ಲಿ ವಸೂಲಾತಿಗೆ ಸೂಚಿಸಲಾದ ಮೊತ್ತ ರೂ.21.80 ಲಕ್ಷಗಳಿಗೆ ಸಂಬಂಧಿಸಿದ ಸಂಸ್ಥೆಯ ವಿರುದ್ಧ ಸಿವಿಲ್ ಮೊಕದ್ದಮೆಯನ್ನು ಹೂಡಲಾಗಿದ್ದು, ಸದರಿ ಮೊಕದ್ದಮೆಯನ್ನು ವಜಾ ಮಾಡಲಾಗಿದ್ದು, (Dismiss for default) ಎಂದಾಗಿರುತ್ತದೆ. ಪ್ರಸ್ತುತ ಸದರಿ ಕೇಸ್‌ನ್ನು ಸರ್ಕಾರಿ ವಕೀಲರಿಂದ ಮರು ತೆರೆಯುವ ಸಂಬಂಧ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br>• ಎಸ್.ಪಿ., ದಕ್ಷಿಣ ಕನ್ನಡ ಜಿಲ್ಲೆ – 2013 ವರ್ಷದಲ್ಲಿ ರೂ.92.20 ಲಕ್ಷ ಮೌಲ್ಯದ ಇಲಾಖಾ ಲಾಂಚ್‌ಗಳನ್ನು ಸಂಪೂರ್ಣ ದುರಸ್ತಿ ಕಾರ್ಯ ಕೈಗೊಳ್ಳುವ ಅನಿವಾರ್ಯತೆ ಹಿನ್ನೆಲೆಯಲ್ಲಿ ಇಲಾಖಾ ಚಟುವಟಿಕೆಗಳಿಗೆ ಬಳಸುವುದು ಆರ್ಥಿಕವಾಗಿ ಲಾಭದಾಯಕವಲ್ಲದ ಕಾರಣ ನಿಯಮಾನುಸಾರ ಸರಕಾರದಿಂದ ರೂ.3,74,400/–ಕ್ಕೆ ಬಿಡ್ ಮೊತ್ತ ನಿಗದಿಪಡಿಸಿ ವಿಲೇಗೊಳಿಸಲು ಆದೇಶಿಸಿದ್ದು, ಆದರೆ ಸದರಿ ಮೊತ್ತಕ್ಕೆ ಹರಾಜಾಗದ ಕಾರಣ ಆದೇಶ ಪಡೆದು ರೂ.1,36,600/–ಕ್ಕೆ ಹರಾಜುಗೊಳಿಸಿ ಸರ್ಕಾರಕ್ಕೆ ಜಮಾ ಮಾಡಲಾಗಿರುತ್ತದೆ. **ಸದರಿ ಕಂಡಿಕೆಯನ್ನು ಮುಕ್ತಾಯಗೊಳಿಸಿರುತ್ತಾರೆ.**<br>• ಆಂತರಿಕ ಲೆಕ್ಕ ಪರಿಶೋಧನಾ ವರದಿಯಲ್ಲಿ ಹಾಗೂ ಮಹಾಲೇಖಪಾಲರ ಲೆಕ್ಕ ಪರಿವೀಕ್ಷಣೆಯಲ್ಲಿ ವಸೂಲಾತಿ ಸೂಚಿಸಲಾದ ಮೊತ್ತವನ್ನು ಯಾವುದೇ ನಿರ್ಲಕ್ಷತನ ವಹಿಸದೇ ಸರಕಾರಕ್ಕೆ ಜಮಾ ಮಾಡಲಾಗುತ್ತಿದೆ. ಆದ್ದರಿಂದ ಯಾವುದೇ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಅಗತ್ಯ ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ. ಉಳಿದ ಬಾಕಿ ವಸೂಲಾತಿ ಮೊತ್ತವನ್ನು ಶೀಘ್ರವಾಗಿ ವಸೂಲಿ ಮಾಡಿ ಸರ್ಕಾರಕ್ಕೆ ಜಮಾ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ಒಇ 47 ಪಿಇಜಿ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು